

# ಒಣಮರದಲ್ಲಿ ಜೀವಸಂಚಾರ



ಚಿತ್ರ ಬರಹ:
**ಕೇಶವ ಕುಡ್ಲ**

ಬೆಟ್ಟಗುಡ್ಡಗಳಲ್ಲಿ ಚಾರಣಕ್ಕಾಗಿ ಸುತ್ತುವಾಗ ಹಲವಾರು ಮರಗಳು ಉರುಳಿ ಒಣಗಿ ಗೆದ್ದಲು ಹಿಡಿದು ಮಣ್ಣಾಗುವ ಹಂತದಲ್ಲಿ ಇರುವುದು ಕಾಣಿಸುತ್ತದೆ. ಒಣಗಿದ ಮರದ ತುಂಡುಗಳನ್ನು ಕುತೂಹಲದಿಂದ ಗಮನಿಸುವಾಗ ಅಲ್ಲಲ್ಲಿ ಅಸ್ಪಷ್ಟವಾಗಿ ಹಲವಾರು ಪ್ರಾಣಿಗಳ ಆಕಾರ ಕಂಡಂತಾಗುತ್ತದೆ! ಹಾಗೆ ಕಾಣಿಸಿದಾಗೆಲ್ಲ ಇವಕ್ಕೆಲ್ಲ ಸೂಕ್ತ ಕಣ್ಣುಗಳನ್ನು ಹಾಕಿದರೆ ಜೀವ ಸಂಚಾರವಾಗಬಹುದೆ.. ಎಂಬ ಕುತೂಹಲ ಕಾಡುತ್ತಿತ್ತು.

ಒಮ್ಮೆ ಗುಂಡ್ಯದಿಂದ ಎಡಕುಮೇರಿವರೆಗಿನ ಚಾರಣದ ಕಾಲದಲ್ಲಿ ಕಾಡುಗಳ್ಳರು ಕಡಿದು ಎಸೆದಿದ್ದ ಒಂದು ಮರದ ತುಂಡು ದೂರದಿಂದ ಹಕ್ಕಿಯಂತೆ ಕಾಣಿಸಿತು. ಅದನ್ನು ಫೋಟೋ ತೆಗೆದುಕೊಂಡು ಬಂದು ಕಂಪ್ಯೂಟರಿನಲ್ಲಿ ಪ್ರಾಣಿಯೊಂದರ ಕಣ್ಣು ಜೋಡಿಸಿದಾಗ ಅದೊಂದು ಜೀವಿಯಂತೆಯೇ ಕಾಣಿಸಿತು. ಅದು ನನ್ನ ಮೊದಲ ಅಪಕ್ವ ಪ್ರಯತ್ನವಾದುದರಿಂದ ವಿಶೇಷವೇನೂ ಸಂಭವಿಸಲಿಲ್ಲ.

ಕೊಡಚಾದ್ರಿಯಲ್ಲಿ ಒಮ್ಮೆ ಅಲೆಯುತ್ತಿದ್ದಾಗ ಪೊದೆಯೊಳಗಿನಿಂದ ಹೆಬ್ಬಾವು ತಲೆ ಹಾಕಿದಂತೆ ಹೆದರಿಸುತ್ತಿದ್ದ ಮರದ ದಿಮ್ಮಿ ಕಾಣಿಸಿತ್ತು. ಕೊಡೇಕಲ್‌ನ ಆಳವಾದ ಶೋಲಾ ಕಾಡಿನ ಕಣಿವೆಯೊಳಗೆ ಇಳಿಯುವಾಗ ಸಂಪೂರ್ಣವಾಗಿ ಗೆದ್ದಲುಗಳ ದಾಯಿಂದ ನಾಶವಾಗುವ ಹಂತಕ್ಕೆ ಬಂದಿದ್ದ ಒಂದು ಮರದ ತುದಿ ಕಾಡು ಕುರಿಯಂತೆ ಅಣಕಿಸಿತು. ಕಳೆದ ಏಳೆಂಟು ವರ್ಷಗಳಲ್ಲಿ ಹೀಗೆ ಅಲ್ಲಲ್ಲಿ ಕಾಣಿಸಿದ ವಿಶಿಷ್ಟ ಮರದ ತುಂಡುಗಳನ್ನು ಕ್ಯಾಮೆರಾದಲ್ಲಿ ತುಂಬಿಸಿಕೊಳ್ಳುತ್ತಾ ಅವಕ್ಕೊಂದು ಸ್ಪಷ್ಟ ರೂಪ ಕೊಡಲು ಪ್ರಯತ್ನ ನಡೆಸುತ್ತಿದ್ದೆ.

ನಮಗೆ ಮರದ ತುಂಡು ಅಮೂರ್ತ ಹಂತದಲ್ಲಿ ಯಾವ ಪ್ರಾಣಿಯಂತೆ ಕಾಣಿಸಿತೋ ಅದೇ ವರ್ಗದ ಜೀವಿಯ ಕಣ್ಣನ್ನು ಕಂಪ್ಯೂಟರ್‌ನಲ್ಲಿ ಕಸಿ ಮಾಡಿದರೆ ಅದು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಉದಾಹರಣೆಗೆ ಚಿರತೆಯಂತೆ ಕಾಣಿಸಿದ ಮರಕ್ಕೆ ಚಿರತೆ ಅಥವಾ ಅಂತಹದ್ದೇ ಯಾವುದಾದರೂ ಮಾಂಸಾಹಾರಿ ಹಿಂಸ್ರ ಪಶುವಿನ ಕಣ್ಣು; ಅನಿಮೇಶ ಎನ್ನಿಸಿಕೊಂಡಿರುವ ಹಾವಿಗೆ ರೆಪ್ಪೆ ಇರುವುದಿಲ್ಲವಾದ್ದರಿಂದ ಹಾವು ಅಥವಾ ಸರೀಸೃಪದ ಕಣ್ಣು... ಹಕ್ಕಿಯಂತೆ ಕಂಡ ಮರಕ್ಕೆ ಹಕ್ಕಿಯದೆ ಕಣ್ಣು – ಹೀಗೆ ಹೊಂದಾಣಿಕೆ ಮಾಡಬೇಕಾಗುತ್ತದೆ.

ನಮ್ಮ ಪ್ರಯತ್ನದಲ್ಲಿ ಸ್ವಲ್ಪವಾದರೂ ಯಶಸ್ಸು ಸಿಕ್ಕಬೇಕೆಂದರೆ ನಾವು ಆಯ್ಕೆ ಮಾಡಿಕೊಂಡ ಮರದ ತುಂಡಿನಲ್ಲಿ ಟೊಂಗೆ ಕಳಚಿಕೊಂಡ ಕುಳಿ ಇರುವುದು ಅತ್ಯಗತ್ಯ. ಇಲ್ಲವಾದಲ್ಲಿ ಕಣ್ಣು ಕೂರಿಸಿದಾಗ ಹೊಂದಾಣಿಕೆ ಆಗುವುದು ಸಾಧ್ಯವೇ ಇಲ್ಲ. ಕುಳಿಯೊಳಗೆ ಕಣ್ಣು ಸೇರಿಸಿದ ನಂತರ ಅದಕ್ಕೆ ಸೂಕ್ತವಾದ ಉಬ್ಬಿದ ಹುಬ್ಬು, ಅದಕ್ಕೆ ಇರಬಹುದಾದ ರೆಪ್ಪೆ ಮತ್ತು ರೆಪ್ಪೆಯ ಕೂದಲು ಇತ್ಯಾದಿ ಸೃಷ್ಟಿಸಬೇಕಾಗುತ್ತದೆ. ಹೀಗೆ ಇಲ್ಲದ್ದನ್ನು 'ಇದೆ' ಎಂದು ತೋರಿಸುವ ಹಾದಿಯಲ್ಲಿ ನಾನು ಪಡೆದ ಎರಡು ಫಲಿತಾಂಶಗಳು ಇಲ್ಲಿವೆ. ಇಲ್ಲಿ ಉತ್ಸಾಹವಿದ್ದರೂ ಜೊತೆಗೆ ಅಪಕ್ವತೆಯಂತೂ ಇದೆ.